ಒಳನಾಡು ಮೀನುಗಾರಿಕೆಗೆ ಒಳಪಡುವ ಸರ್ವಋತು ಕೆರೆಗಳು ಮತ್ತು ಋತುಮಾನ ಕೆರೆಗಳ ವಿವರ ಈ ಕೆಳಕಂಡಂತಿವೆ :

ಕ್ರ. ಸಂ.	ಜಲ ಸಂಪನ್ಮೂಲಗಳು	ಋತುಮಾನ ಕೆರೆಗಳು (ಅಂದಾಜು)	ಸರ್ವಋತು ಕೆರೆಗಳು (ಅಂದಾಜು)
1	ಇಲಾಖಾ ಕೆರೆಗಳು	2379	1020
2	ಗ್ರಾಮಪಂಚಾಯತಿ ಕೆರೆಗಳು	22624	
3	ಜಲಾಶಯಗಳು	–	82

ಕಳೆದ ಮೂರು ವರ್ಷಗಳಲ್ಲಿ ಒಳನಾಡು ಮೀನುಗಾರಿಕಾ ವಲಯದ ಮೀನು ಉತ್ಪಾದನೆಯ ಗುರಿ ಮತ್ತು ಸಾಧನೆಯ ವಿವರ ಈ ಕೆಳಕಂಡಂತಿವೆ :

ಕ್ರಮ ಸಂಖ್ಯೆ	ವರ್ಷ	ಗುರಿ (ಲಕ್ಷ ಮೆ. ಟನ್)	ಸಾಧನೆ (ಲಕ್ಷ ಮೆ. ಟನ್)
1	2008–09	1.35	1.44
2	2009–10	1.35	1.59
3	2010–11	1.50	1.86

ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟ್ ರಸ್ತೆಯ ಸುವ್ಯವಸ್ಥೆಗಾಗಿ

257 (469) ಶ್ರೀಹ್ಯಾರೀಸ್ ಎನ್.ಎ. (ಶಾಂತಿನಗರ) :– ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರಾ ಹದಗೆಟ್ಟಿರುವ ಶಿರಾಡಿಘಾಟ್ ರಸ್ತೆಯ ದುರಸ್ತಿಗಾಗಿ ಸರ್ಕಾರದ ಕ್ರಮಗಳೇನು ;

ಆ) ಅತ್ಯಂತ ಹೆಚ್ಚು ವಾಹನ ಸಂಚಾರವಿರುವ ಈ ಹೆದ್ದಾರಿಯನ್ನು ಖಾಯಂ

ಆಗಿ ಕಾಂಕ್ರೀಟೀಕರಣಗೊಳಿಸಿ ವ್ಯವಸ್ಥಿತ ಸಂಚಾರ ಯೋಗ್ಯ ರಸ್ತೆಯನ್ನಾಗಿ ಮಾಡಲು ಸರ್ಕಾರದ ಕ್ರಿಯಾ ಯೋಜನೆಗಳೇನು ;

ಇ) ಶಿರಾಡಿಘಾಟ್ ರಸ್ತೆಯನ್ನು ಸರ್ವ ಋತು ರಸ್ತೆಯನ್ನಾಗಿ ಮಾಡಲು ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ ಮತ್ತು ಅದಕ್ಕೆ ಬೇಕಾಗುವ ಹಣದ ಮೊತ್ತ ಹಾಗೂ ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ಮೊತ್ತದ ವಿವರಗಳನ್ನು ನೀಡುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ರಾಷ್ಟ್ರೀಯ ಹೆದ್ದಾರಿ–48 ರ ಕಿ.ಮೀ. 210.00 ರಿಂದ 270.00 ತನಕ ಶಿರಾಡಿಘಾಟ್ ಎಂದು ಪರಿಗಣಿಸಲಾಗಿದೆ. ಸರಪಳಿ ಕಿ.ಮೀ. 216.00 ರಿಂದ 263.00 ರವರೆಗಿನ ಭಾಗವು ಕಡಿದಾದ ತಿರುವುಗಳಿಂದ ಕೂಡಿದ್ದು, ರಸ್ತೆಯ ಒಂದು ಭಾಗವು ಘಟ್ಟ ಪ್ರದೇಶವಾಗಿದ್ದು ಇನ್ನೊಂದು ಭಾಗವು ಪ್ರಪಾತದಿಂದ ಕೂಡಿರುತ್ತದೆ. ಶಿರಾಡಿಘಾಟ್‌ನ ಪೂರ್ಣ ಭಾಗವು ದಟ್ಟ ಅರಣ್ಯ ಪ್ರದೇಶದಿಂದ ಕೂಡಿದ್ದು ಮಳೆಗಾಲದಲ್ಲಿ ಸರಾಸರಿ 6000 ದಿಂದ 7000 ಮಿ.ಮೀ. ಮಳೆ ಬೀಳುವ ಪ್ರದೇಶವಾಗಿರುತ್ತದೆ. ಇಲ್ಲಿ ನಡೆಸಲಾಗಿರುವ ಟಾರ್ ಮಿಶ್ರಿತ ಪದರದ ಅಭಿವೃದ್ಧಿ ಕಾಮಗಾರಿಯು ಗುಡ್ಡ ಪ್ರದೇಶದಲ್ಲಿ ಮಳೆಗಾಲದಲ್ಲಿ ಬಸಿಯುವ ನೀರು ಬುಗ್ಗೆಯಾಗಿ ರಸ್ತೆ ಮೇಲ್ಪ್ಪ ಮೇಲೆ ಹೊರಬರುತ್ತದೆ. ಇದರಿಂದಾಗಿ ಹಾಗೂ ಅಧಿಕ ಸಂಖ್ಯೆಯ ವಾಹನ ದಟ್ಟಣೆಯಿಂದ (ಅದಿರು ತುಂಬಿದ ಲಾರಿಗಳು ಹಾಗೂ ಗ್ಯಾಸ್ ಟ್ಯಾಂಕರ್ಸ್) ಈ ಹಿಂದೆ ಮಾಡಲಾಗಿರುವ ಕೆಲವು ಭಾಗದ ಟಾರ್ ರಸ್ತೆಯು ಅಲ್ಪ ಅವಧಿಯ ಒಳಗಾಗಿ ಹಾಳಾಗಿರುತ್ತದೆ.

ಆದಾಗ್ಯೂ ಶಿರಾಡಿ ಘಾಟ್ ರಸ್ತೆಯನ್ನು ವಾಹನಗಳ ಓಡಾಟಕ್ಕೆ ಯೋಗ್ಯವಾಗಿರಿಸಲು ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ಅನುದಾನದಲ್ಲಿ ಕ್ರಮಕೈಗೊಳ್ಳಗಾಗಿದೆ. ಈಗ ಗುಂಡಿ ಮುಚ್ಚುವ ಕೆಲಸ ಪೂರ್ಣಗೊಂಡಿದ್ದು ವಾಹನ ಸಂಚಾರ ಸುಗಮವಾಗಿರುತ್ತದೆ.

ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯ, ನವದೆಹಲಿಗೆ ದಿನಾಂಕ: 13–12–2011 ರಂದು ರೂ. 10.00 ಕೋಟಿ ನಿರ್ವಹಣೆ ಕಾಮಗಾರಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಕೋರಲಾಗಿದೆ.

ಇ) ಈ ಬಗ್ಗೆ ಕೆಲವು ತಾಂತ್ರಿಕ ತಜ್ಞರು ಹಾಗೂ ಕೇಂದ್ರ ಭೂಸಾರಿಗೆ ಮಂತ್ರಾಲಯದ ಹೆಚ್ಚುವರಿ ಡೈರೆಕ್ಟರ್ ಜನರಲ್‌ರವರು ಸೆಪ್ಟೆಂಬರ್ 2009 ರಲ್ಲಿ ಪರಿವೀಕ್ಷಣೆ ನಡೆಸಿ. ಈ

ಭಾಗದಲ್ಲಿ ಡಾಂಬರೀಕರಣ ಮೇಲ್ಪ್ಯೆಯುಳ್ಳ ಅಭಿವೃದ್ಧಿ ಕೆಲಸಗಳು ಸೂಕ್ತ ಪರಿಹಾರ ಅಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ಭಾಗಕ್ಕೆ ದೂರದೃಷ್ಟಿಯಿಂದ ಹಾಗೂ ಹೆಚ್ಚಿನ ಅವಧಿಗೆ ಬಾಳಿಕೆ ಬರುವ ಕಾಂಕ್ರೀಟ್ ರಸ್ತೆ ನಿರ್ಮಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ರೂ. 118.00 ಕೋಟಿ ರೂ.ಗಳ ಅಂದಾಜು ಪಟ್ಟಿಯನ್ನು ಸೆಪ್ಟೆಂಬರ್ 2009 ರಲ್ಲಿ ಸಲ್ಲಿಸಲಾಗಿತ್ತು.

ಆದರೆ, ಕೇಂದ್ರ ಭೂಸಾರಿಗೆ ಮಂತ್ರಾಲಯವು ತಮ್ಮ ಪತ್ರ ದಿನಾಂಕ: 01–03–2011 ರಲ್ಲಿ ಅಧ್ಯಕ್ಷರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ನವದೆಹಲಿ ರವರಿಗೆ ಪತ್ರ ಬರೆದು ರಾಷ್ಟ್ರೀಯ ಹೆದ್ದಾರಿ–48 ಹಾಸನದಿಂದ ಮಂಗಳೂರು ವರಗಿನ ರಸ್ತೆಯನ್ನು NHAI ರವರು ನಿರ್ವಹಿಸಲು ಈಗಾಗಲೇ ಗುರುತಿಸಲಾಗಿದ್ದು, ಪ್ರಸ್ತುತ ಕಿ.ಮೀ. 237.00 ರಿಂದ 263.00 ರವರಗಿನ ರಾ.ಹೆ.–48ರ ಶಿರಾಡಿ ಘಾಟ್ ಭಾಗದ ರಸ್ತೆ ಅಭಿವೃದ್ಧಿ ಕಾರ್ಯವನ್ನು ಸಹ NHDP IVB ಅಡಿಯಲ್ಲಿ NHAI ರವರೇ ಕೈಗೊಳ್ಳಲು ತೀರ್ಮಾನಿಸಿರುವುದಾಗಿ ತಿಳಿಸಿರುತ್ತಾರೆ.

ಈಗ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರವರು ಹಾಸನದಿಂದ ಬಿ.ಸಿ.ಕ್ರಾಸ್‌ವರೆಗೆ (ರಾಷ್ಟ್ರೀಯ ಹೆದ್ದಾರಿ–48 ಸರಪಳಿ 189.50 ರಿಂದ 328.00 ವರೆಗೆ) ಕಿ.ಮೀ. 210.00 ರಿಂದ 270.00 ತನಕ ಶಿರಾಡಿ ಘಾಟ್ ಭಾಗದ ಸೇರಿಸಿ, ನಾಲ್ಕು:ಆರು ಪಥದ ರಸ್ತೆಗೆ "Conducting Preparation of Feasibility-cum-Preliminary Project Report for Widening to 4/6 laning of Hassan-Bantwal section (BC Road) of NH-48 to be executed on DBFO Pattern" ಕಾರ್ಯವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಪ್ರಗತಿಯಲ್ಲಿರುತ್ತದೆ.

ಇ) ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ಹಾಸನದಿಂದ ಬಿ.ಸಿ.ಕ್ರಾಸ್‌ವರೆಗೆ (ರಾಷ್ಟ್ರೀಯ ಹೆದ್ದಾರಿ–48 ಸರಪಳಿ 189.50 ರಿಂದ 328.00 ವರೆಗೆ) ಕಿ.ಮೀ. 210.00 ರಿಂದ 270.00 ತನಕ ಶಿರಾಡಿ ಘಾಟ್ ಭಾಗದ ಸೇರಿಸಿ, ನಾಲ್ಕು:ಆರು ಪಥದ ರಸ್ತೆಗೆ "Conducting Preparation of Feasibility-cum-Preliminary Project Report for Widening to 4/6 laning of Hassan-Bantwal section (BC Road) of NH-48 to be executed on DBFO

Pattern" ಕಾರ್ಯವು ರಾಷ್ಟ್ರೀಯ ಪೂರ್ಣಗೊಂಡ ನಂತರ ಕಾಮಗಾರಿಗಳ ವಿವರ ಮತ್ತು ಅದಕ್ಕೆ ಬೇಕಾಗುವ ಹಣದ ಮೊತ್ತ ತಿಳಿದುಬರುತ್ತದೆ.

ಮೀನುಗಾರಿಕೆ ಅಭಿವೃದ್ಧಿಗಾಗಿ ಸರಕಾರದ ಯೋಜನೆಗಳು

258(470) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) :– ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸರಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳೇನು; ಇಲಾಖೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ಮತ್ತು ಬಿಡುಗಡೆಗೊಳಿಸಿದ ಅನುದಾನದ ವಿವರಗಳೇನು;

ಆ) ಮೀನುಗಾರಿಕಾ ವಲಯಗಳಿಂದ ಬರುವ ಸರಾಸರಿ ವಾರ್ಷಿಕ ಉತ್ಪನ್ನದ ಪ್ರಮಾಣ ಎಷ್ಟು; ಆ ಕುರಿತಾದ ಪ್ರಗತಿಯ ವಿವರಗಳೇನು;

ಇ) ಮೀನುಗಾರಿಕಾ ಯೋಜನೆಗಳಲ್ಲಿ ಮೀನುಗಾರಿಕೆಯನ್ನು ಕುಲವೃತ್ತಿಯನ್ನಾಗಿ ಮಾಡಿಕೊಂಡು ಬಂದ ಜಾತಿ/ಜನಾಂಗಗಳಿಗೆ ಆದ್ಯತೆ ಮತ್ತು ಮೀಸಲಾಗಿ ಇತ್ಯಾದಿಗಳನ್ನು ಇಲಾಖೆಯು ಒದಗಿಸಿದೆಯೇ; ಆ ಕುರಿತಾದ ವಿವರಗಳನ್ನು ಒದಗಿಸುವುದು?

ಶ್ರೀ ಆನಂದ ವಸಂತ ಆಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :–

ಅ) ರಾಜ್ಯದಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸರಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ; ಇಲಾಖೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಿದ ಮತ್ತು ವೆಚ್ಚ ಮಾಡಿದ ಅನುದಾನದ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.

ಆ) ಕಳೆದ ಮೂರು ವರ್ಷಗಳಿಂದ ಒಳನಾಡು ಮತ್ತು ಕರಾವಳಿ ಮೀನುಗಾರಿಕೆ ವಲಯಗಳಿಂದ ಬಂದಿರುವ ವಾರ್ಷಿಕ ಮೀನು ಉತ್ಪಾದನೆ ಮತ್ತು ಪ್ರಗತಿ ವಿವರಗಳು ಈ ಕೆಳಗಿನಂತಿರುತ್ತವೆ.